ಈ) ಈ ನಿಯಮಗಳನ್ನು ಅಳವಡಿಸಿಕೊಳ್ಳುವುದರಿಂದ ಎಲ್ಲಾ ಪದವೃಂದದ ಅಧಿಕಾರಿ / ನೌಕರರಿಗೆ ಬಡ್ತಿ ನೀಡಬಹುದಾಗಿರುತ್ತದೆ.

ಉ) ವೃಂದ ಮತ್ತು ನೇಮಕಾತಿ ನಿಯಮಗಳನ್ನು ಹೊರಡಿಸುವುದು ಅಂತಿಮ ಹಂತದಲ್ಲಿದೆ. ಪ್ರಸ್ತುತ ಕಾರ್ಯಕಾರಿ ಆದೇಶಾನುಸಾರ ಪ್ರಥಮ ದರ್ಜೆ ಸಹಾಯಕರ ಪದವೃಂದಕ್ಕೆ ಬಡ್ತಿ ನೀಡುವ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಂತಿಮವಾಗಿ ಹೊರಡಿಸುವವರೆಗೆ ಸ್ಥಗಿತಗೊಳಿಸುವಂತೆ ಸೂಚಿಸಲಾಗಿರುತ್ತದೆ. ನಿಯಮ ಉಲ್ಲಂಘನೆ ಯಾಗಿರುವುದಿಲ್ಲ.

384(471) ಶ್ರೀ ಶಿವರಾಮು ಬಿ. (ಗಂಡಸಿ) : ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಳಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಮಂಜೂರಾತಿಯಾದ ಯೋಜನೆಗಳು, ಪ್ರಕೃತಿ ವಿಕೋಪ ಯೋಜನೆಗಳು ಸೇರಿದಂತೆ ಅನುಷ್ಠಾನಗೊಳಿಸುವಾಗ ಅದಕ್ಕೆ ಬೇಕಾದ ಪೈಪು, ಸಿಸ್ಟರ್ನ್ (Cistern) ಇತರೆ ಸಾಮಗ್ರಿಗಳನ್ನು ಇಲಾಖೆಯಿಂದ ಒದಗಿಸಲಾಗಿದೆಯೇ;

ಆ) ಒದಗಿಸಿದ್ದಲ್ಲಿ, ಅವುಗಳನ್ನು ಕೊಂಡುಕೊಳ್ಳುವಾಗ ಸರ್ಕಾರದ ನಿಯಮದಂತೆ ಪಾರದರ್ಶಕ ಕಾಯ್ದೆ ನಿಯಮಗಳನ್ನು ಅನುಸರಿಸಲಾಗಿದೆಯೇ;

ಇ) ಅನುಸರಿಸದಿದ್ದಲ್ಲಿ ಕಾರಣವೇನು? (ವಿವರಗಳನ್ನು ಚನ್ನರಾಯಪಟ್ಟಣ ಮತ್ತು ಹಾಸನಕ್ಕೆ ಸೇರಿದಂತೆ ನೀಡುವುದು)

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಮೀಣ ನೀರು ಸರಬರಾಜು ಸಚಿವರು)

ಅ) ಹೌದು.

ಆ) ಮತ್ತು ಇ) ಸರ್ಕಾರದ ಪಾರದರ್ಶಕ ನೀತಿಯನ್ವಯ ಅನುಮೋದಿತ ಸರಬರಾಜು ಸಂಸ್ಥೆಗಳಿಂದ ಸಾಮಗ್ರಿಗಳನ್ನು ಖರೀದಿಸಲಾಗಿದೆ.

386(396) ಶ್ರೀ ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ವರ್ಷ ನಡೆಸಿದ ಪಡಿತರ ಚೀಟಿದಾರರ ಸಮೀಕ್ಷೆಯಲ್ಲಿ ಗುರ್ತಿಸಲಾಗಿರುವ ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿ ವಿತರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅರ್ಹ ಫಲಾನುಭವಿಗಳೆಲ್ಲರಿಗೂ ಪಡಿತರ ಚೀಟಿ ವಿತರಿಸಲು ಸರ್ಕಾರ ಉದ್ದೇಶಿಸಿದೆಯೇ;

ಇ) ಇದ್ದಲ್ಲಿ, ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?